ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 04-03-2021 ಪ್ರಶ್ನೆ ಸಂಖ್ಯೆ : 535 (662)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಡಾ: ವೈ. ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 04-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಸಚಿವಾಲಯಗಳಲ್ಲಿ ಕಡತಗಳ ನಿರ್ವಹಣೆ ಬಗ್ಗೆ

(ಅ) ಸಚಿವಾಲಯಗಳಲ್ಲಿ ಕಡತ ವಿಲೇವಾರಿ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಇಲಾಖಾವಾರು 3 ವರ್ಷಗಳ ವಿವರ ನೀಡುವುದು;

(ಇ) ಈ ಸಚಿವಾಲಯದ ಆಡಳಿತಕ್ಕೆ ಸಕಾಲ ಅನ್ವಯಿಸುವುದಿಲ್ಲವೇ;

(ಈ) ಅನ್ವಯಿಸಿದ್ದಲ್ಲಿ, ಸಕಾಲದ ಅಡಿಯಲ್ಲಿ ನಿಗದಿತ ಸಮಯದಲ್ಲಿ ಕಡತ ವಿಲೇವಾರಿ ಮಾಡದ ನೌಕರರ ವಿವರಗಳನ್ನು ಇಲಾಖಾವಾರು ನೀಡುವುದು;

(ಉ) ಈ ರೀತಿ ಮಂದಗತಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿ ವರ್ಗದವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)